


ಏಳುಬೀಳುಗಳ ನಡುವಿನ ಹಾದಿಯಲ್ಲಿ ಕರ್ನಾಟಕದ ರಾಬಿನ್ ಉತ್ತಪ್ಪ

ಬ್ಯಾಟ್ಸ್‌ಮನ್ ಯಾರೆಂಬ ಪ್ರಶ್ನೆ ತಂಡದ ವ್ಯವಸ್ಥಾಪಕ ಸಮಿತಿ ಹಾಗೂ ವಿರಾಟ್ ಕೊಹ್ಲಿಯನ್ನು ಸದ್ಯಕ್ಕೆ ಕಾಡುತ್ತಿದೆ. ಅಜಿಂಕ್ಯ ರಹಾನೆ, ಅಂಬಟಿ ರಾಯುಡು, ಶ್ರೇಯಸ್ ಅಯ್ಯರ್, ಕೆ.ಎಲ್. ರಾಹುಲ್ – ಈ ನಾಲ್ಕು ಹೆಸರುಗಳು ಮೇಲುನೋಟಕ್ಕೆ ಕೇಳಿಬರುತ್ತಿವೆ.

ಆಸ್ಟ್ರೇಲಿಯಾ ವಿರುದ್ಧದ ಏಕದಿನ ಕ್ರಿಕೆಟ್ ಪಂದ್ಯಗಳಿಗೆ ಮೊದಲು ಕೊಹ್ಲಿ ಐಪಿಎಲ್ ವಿಷಯ ಮಾತನಾಡುತ್ತಲೇ ರಾಹುಲ್ ಬಗೆಗೂ ಒಂದಿಷ್ಟು ಒಳ್ಳೆಯದನ್ನು ಹೇಳಿದ್ದರಲ್ಲ, ಅದರ ಸಾರ ಹೀಗಿದೆ: ‘ರಾಹುಲ್ ಸಹಜ ಆಟಕ್ಕೆ ಕುದುರಿಕೊಂಡರೆ ನಮಗೆ ನಿರಾಳ. ಅವನಲ್ಲಿ ಕ್ರಿಕೆಟಿಂಗ್ ಶಾಟ್‌ಗಳ ಭಂಡಾರವೇ ಇದೆ. ಒಮ್ಮೆ ಸ್ಥಿರತೆ ಕಂಡುಕೊಂಡರೆ ಎದುರಾಳಿಗೆ ಅಪಾಯಕಾರಿ. ಅದನ್ನು ನಾನು ತುಂಬ ಹತ್ತಿರದಿಂದ ಕಂಡಿದ್ದೇನೆ’. ಕೊಹ್ಲಿ ಆಡಿದ ಈ ಮಾತನ್ನು ಕೇಳಿ ಉಳಿದ ಮೂವರಲ್ಲಿ ಕಿಚ್ಚು ಹೆಚ್ಚಾಗಿದ್ದರೂ ಅಚ್ಚರಿಯಿಲ್ಲ. ಅವರೆಲ್ಲ ಈ ಐಪಿಎಲ್‌ನಲ್ಲಿ ಕಡಿದು ಗುಡ್ಡೆ ಹಾಕಿ ತೋರಿಸಬೇಕಿದೆ.

‘ಡೆಲ್ಲಿ ಕ್ಯಾಪಿಟಲ್ಸ್’ ತಂಡದ ಶ್ರೇಯಸ್ ಅಯ್ಯರ್ ಆರಂಭದ ಪಂದ್ಯದಲ್ಲಿ ಒಳ್ಳೆಯ ಲಯದಲ್ಲಿಯೇ ಆಡತೊಡಗಿದರು. ಅವರ ಒಂದು ಡ್ರೈವ್ ಅನ್ನು ಮುಂಬೈ ಇಂಡಿಯನ್ಸ್ ದೈತ್ಯ ಕೀರನ್ ಪೊಲಾರ್ಡ್ ಅದ್ಭುತ ಕ್ಯಾಚ್ ಆಗಿ ಪರಿವರ್ತಿಸಿಬಿಟ್ಟರು. ಶ್ರೇಯಸ್ ಉತ್ಸಾಹಕ್ಕೆ ತಣ್ಣೀರು. ಶಾಟ್ ಸೆಲೆಕ್ಷನ್ ಚೆನ್ನಾಗಿರುವುದಷ್ಟೇ ಅಲ್ಲ, ಹೊಡೆಯುವ ಜಾಗ ಯಾವುದು ಎಂದು ಅಳೆಯುವುದು ಕೂಡ ಈಗ ಮುಖ್ಯವಾಗಿದೆ. ಚುಟುಕು ಕ್ರಿಕೆಟ್‌ನಲ್ಲಿ ಒತ್ತಡದ ನೊಗ ಹೆಗಲಿನಿಂದ ಇಳಿಯುವುದೇ ಅಪರೂಪ. ಹೀಗಾಗಿ ಮಾನಸಿಕ ಆಟದ ಹಲವು ಪಾಠಗಳು ಇಲ್ಲಿ ಕಲಿಯಲು ಸಿಗುತ್ತವೆ. ಅಯ್ಯರ್ ಈಗ ಅಂಥ ಪಾಠ ಕಲಿಯುತ್ತಿರಬಹುದು.

ಅಂಕಿಅಂಶಗಳ ಕಡೆಗೆ ಕಣ್ಣಾಡಿಸಿದರೆ ಅನುಭವಿಗಳೇ ಐಪಿಎಲ್‌ನಲ್ಲೂ ಮೆರೆದಿರುವುದಕ್ಕೆ ಅಸಂಖ್ಯ ಉದಾಹರಣೆಗಳು ಸಿಗುತ್ತವೆ.

ಒಂದು ಸರಳ ಪ್ರಶ್ನೆ: ಇದುವರೆಗೆ ಐಪಿಎಲ್‌ನಲ್ಲಿ ಅತಿ ಹೆಚ್ಚು ಬೌಂಡರಿಗಳನ್ನು ಹೊಡೆದಿರುವ ಆಟಗಾರ ಯಾರು? ಕ್ರಿಕೆಟ್ ಪ್ರಿಯರನ್ನು ಸುಮ್ಮನೆ ಕೇಳಿ ನೋಡಿದರೂ ಅನೇಕರು ಸರಿಯಾದ ಉತ್ತರ ಊಹಿಸಲಾರರು. ಮಾರ್ಚ್ 28ರವರೆಗಿನ ಲೆಕ್ಕ ಗಮನಿಸಿದರೆ, ಈ ದಾಖಲೆ ಗೌತಮ್ ಗಂಭೀರ್ ಹೆಸರಿನಲ್ಲಿದೆ. ರಾಜಕೀಯ ಮೊಗಸಾಲೆಗೆ ಕಾಲಿಟ್ಟಿರುವ ಗೌತಮ್ ಇದುವರೆಗೆ 491 ಬೌಂಡರಿಗಳನ್ನು ಐಪಿಎಲ್‌ನಲ್ಲಿ ಹೊಡೆದಿದ್ದಾರೆ. ಅವರಿಗಿಂತ 20 ಬೌಂಡರಿಗಳಷ್ಟೇ ಹಿಂದೆ ಶಿಖರ್ ಧವನ್ ಇದ್ದಾರೆ. ಸುರೇಶ್ ರೈನಾ ಕೂಡ 455 ಬೌಂಡರಿ ಗಳಿಸಿದ್ದು, ತಾವೂ ಕಡಿಮೆ ಏನಲ್ಲ ಎಂದು ಸಾಬೀತುಪಡಿಸಿದ್ದಾರೆ. ವಿರಾಟ್ ಕೊಹ್ಲಿ, ರಾಬಿನ್ ಉತ್ತಪ್ಪ ಬೌಂಡರಿ ಗಳಿಕೆ ಪಟ್ಟಿಯಲ್ಲಿ ನಂತರದ ಸ್ಥಾನದಲ್ಲಿದ್ದು, ಪೋಟಿ ನೀಡುತ್ತಿದ್ದಾರೆ.

ಐಪಿಎಲ್‌ನ ಸಿಕ್ಸರ್ ಸರದಾರರೇ ಬೇರೆ. ಕ್ರಿಸ್ ಗೇಲ್ ಹೆಸರಲ್ಲಿ 298 ಸಿಕ್ಸರ್‌ಗಳಿವೆ. ಮಾರ್ಚ್ 28ರಂದು ದೋನಿಯನ್ನು ಹಿಂದಿಕ್ಕಿದ

ಕಪ್ ನಮ್ದೇ